ಇವರಿಗೆ ವಿಶೇಷ ಸಂದರ್ಭ ಎಂದು ಭಾವಿಸಿ ಹಣ ಬಿಡಂಗಡೆ ಮಾಡುವಂತೆ ಕೇಳಿಕೊಂಡರೂ ಇನ್ನೂ ನಿರ್ಣಯ ಆಗದೆ ಇರುವುದೂ ಈ ಬಗ್ಗೆ ಹಣ ಬಿಡುಗಡೆ ಮಾಡುವಂತೆ ಒತ್ತಾಯಿಸುತ್ತೇನೆ.

ಅಮ್ಮಣಗಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕಳೆದ ಹಲವಾರು ವರ್ಷಗಳಿಂದ ಲೇಡಿ ಮೆಡಿಕಲ್ ಆಫೀಸರ್ ಹಾಗೂ ವೈದ್ಯಾಧಿಕಾರಿಗಳು ಇಲ್ಲದಿರುವುದರಿಂದ ಸಾರ್ವಜನಿಕರು ಹಲವಾರು ತೊಂದರೆಗಳನ್ನು ಅನುಭವಿಸಬೇಕಾಗಿದೆ. ಸರಕಾರವು ಈ ದಿಸೆಯಲ್ಲಿ ಕೂಡಲೇ ಕ್ರಮ ಕೈಗೊಂಡು ವೈದ್ಯಾಧಿಕಾರಿ ಹಾಗೂ ಮಹಿಳಾ ವೈದ್ಯಾಧಿಕಾರಿಗಳನ್ನು ನೇಮಕ ಮಾಡಬೇಕಾಗಿ ಒತ್ತಾಯಿಸುತ್ತೇನೆ. ಹಾಗೂ ಈ ಬಗ್ಗೆ ಸದನದಲ್ಲಿ ಮಾನ್ಯ ಆರೋಗ್ಯ ಸಚಿವರು ಹೇಳಿಕೆ ನೀಡುವಂತೆ ಒತ್ತಾಯಿಸುತ್ತೇನೆ.

ಶ್ರೀ ಬಿ. ರಾಚಯ್ಯ (ಮಾನ್ಯ ಆರೋಗ್ಯ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೆ, ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ''ಕಣಗಲ'' ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ನಿರ್ಮಾಣಕ್ಕೆ ಅಗತ್ಯ ಜಮೀನನ್ನು ವಶಪಡಿಸಿಕೊಳ್ಳಲು ಭೂಸ್ವಾಧೀನಕ್ಕಾಗಿ ಕಣಗಲ ಮಂಡಲ ಪಂಚಾಯಿತಿಯವರು ಬಾಕಿ ಹಣವನ್ನು ತುಂಬಲು ಸಾಧ್ಯವಿಲ್ಲವೆಂದು ತಿಳಿಸಿದ್ದಾರೆ. ಇದರಿಂದ ಕಟ್ಟಡ ನಿರ್ಮಾಣದಲ್ಲಿ ವಿಳಂಬವಾಗಿದೆ. ಈಗ ಅನಿವಾರ್ಯವಾಗಿ ಬೆಳಗಾವಿ ಜಿಲ್ಲಾ ಪರಿಷತ್ತು ಈ ಹಣವನ್ನು ತುಂಬಬೇಕಾಗಿದೆ. ಈ ಬಾಕಿ ಹಣದ ವೊತ್ತ ಇಂದಿನ ಅಂದಾಜು ಪ್ರಕಾರ ೩೨,೦೦೦-೦೦ ರೂ.ಗಳಾಗಿರುತ್ತದೆ. ಅದನ್ನು ಪಾವತಿ ಮಾಡುವಾಗ ಮತ್ತೆ ಲೆಕ್ಕ ಹಾಕಿ ಪೂರ್ಣವಾಗಿ ಪಾವತಿ ಮಾಡಬೇಕಾಗುತ್ತದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡ ನಿರ್ಮಾಣಕ್ಕಾಗಿ ಒದಗಿಸಿರುವ ಹಣದಲ್ಲಿ ''ಕಣಗಲ'' ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡಕ್ಕೂ ಆದ್ಯತೆ ಮೇಲೆ ಹಣ ಬಿಡುಗಡೆ ಮಾಡಲು ಬೆಳಗಾವಿ ಜಿಲ್ಲಾ ಪರಿಷತ್ತಿಗೆ ಬರೆಯಲಾಗುವುದು.

ಅಮ್ಮಣಗಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮೂರು ವೈದ್ಯರ ಹುದ್ದೆಗಳಿದ್ದು ಎರಡು ಹುದ್ದೆಗಳನ್ನು ಪುರುಷ ವೈದ್ಯಾಧಿಕಾರಿಗಳಿಂದ ತುಂಬಲಾಗಿದೆ. ಮಹಿಳಾ ವೈದ್ಯಾಧಿಕಾರಿಯ ಹುದ್ದೆ ದಿನಾಂಕ ೪-೧೨-೧೯೮೬ ರಿಂದ ಖಾಲಿ ಇದ್ದು ಅದನ್ನು ಪ್ರಸಕ್ತ ಸಾಲಿನ ಸಾಮಾನ್ಯ ವರ್ಗಾವಣೆ ಕಾಲದಲ್ಲಿ ಭರ್ತಿ ಮಾಡಲಾಗುವುದು.

(೪) ಜಿಲ್ಲೆಗಳ ಹಾಗೂ ತಾಲ್ಲೂಕುಗಳ ಪುನರ್ವಿಂಗಡನೆಗೆ ರಚಿಸಲಾಗಿದ್ದ ಸಮಿತಿಗಳವರಂ ಬೆಳ್ತಂಗಡಿ ಜನರ ಅಭಿಪ್ರಾಯಗಳನ್ನು ಪಡೆಯದಿರುವ ಬಗ್ಗೆ

ಶ್ರೀ ಕೆ. ವಸಂತಬಂಗೇರ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಹೆಚ್ಚು ಜಿಲ್ಲೆಗಳು ಹಾಗೂ ತಾಲ್ಲೂಕುಗಳನ್ನು ರಚಿಸುವುದಕ್ಕೋಸ್ಕರ ಸರ್ಕಾರದವರು ಎರಡು ಸಮಿತಿಗಳನ್ನು ರಚಿಸಿದ್ದರು ಹುಂಡೇಕರ್ ಸಮಿತಿ ಮತ್ತು ಗುದ್ದಿಗೌಡರ ಸಮಿತಿ. ಈ ಸಮಿತಿಗಳನ್ನು ರಚನೆ ಮಾಡಿದ ಉದ್ದೇಶ ಆಯಾ ಕ್ಷೇತ್ರಗಳಿಗೆ ಹೋಗಿ ಕ್ಷೇತ್ರದ ಜನತೆಯ ಅಭಿಪ್ರಾಯ ಅಂತೆಯೇ ಜನಪ್ರತಿನಿಧಿಗಳ ಅಭಿಪ್ರಾಯವನ್ನು ಪಡೆದು ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವುದು. ಆದರೆ ಈ ಎರಡೂ ಸಮಿತಿಯವರು ಕೂಡ ಬೆಳ್ತಂಗಡಿ ತಾಲ್ಲೂಕಿಗೆ ಬರದೆ ನನ್ನ ಕ್ಷೇತ್ರದ ಜನತೆಯ ಹಾಗೂ ನನ್ನ ಅಭಿಪ್ರಾಯವನ್ನು ಪಡೆಯದೇ ಬೆಳ್ತಂಗಡಿ ತಾಲ್ಲೂಕನ್ನು ಎರಡು ಪ್ರಾಂತದಲ್ಲಿ ತುಂಡರಿಸಿ ಬೇರೆ ತಾಲ್ಲೂಕಿಗೆ ಸೇರ್ಪಡೆ ಮಾಡುವ ಶಿಫಾರಸ್ ಮಾಡಿರುವರು ವಿಷಾದನೀಯ. ಈ ಸಮಿತಿಯವರಿಗೆ ಆಯಾ ಕ್ಷೇತ್ರದ ಜನತೆಯ, ಜನ ಪ್ರತಿನಿಧಿಗಳ ಅಭಿಪ್ರಾಯವನ್ನು ಧಿಕ್ಕರಿಸಿ ಏಕಪಕ್ಷೀಯವಾಗಿ ಅಭಿಪ್ರಾಯವನ್ನು ಕೊಡಲು ಅಧಿಕಾರ ಕೊಟ್ಟವರು ಯಾರು ? ನನ್ನ ಜನತೆಯ ಅಭಿಪ್ರಾಯದಂತೆ ಈ ಎರಡೂ ಸಮಿತಿಗಳಿಗೆ ನಾನು ಧಿಕ್ಕಾರ ಹೇಳಬಯಸುತ್ತೇನೆ, ಆ ಎರಡೂ ಸಮಿತಿಯವರು ಕ್ಷೇತ್ರದ ಜನತೆ, ಹಾಗೂ ಜನ ಪ್ರತಿನಿಧಿಯ ಅಭಿಪ್ರಾಯ ಪಡೆಯದೆ ಕ್ಷೇತ್ರಕ್ಕೆ ಬಾರದೆ ಸಮ್ಮ ತಾಲ್ಲೂಕಿನ ವೇಣೂರು ಫರ್ಕಾವನ್ನು, ಮೂಡಬಿದ್ರೆ, ತಾಲ್ಲೂಕಿಗೂ ಅಲ್ಲದೆ ಕೊಕ್ಕರಪಿರ್ಕಾದ ಆರು ಗ್ರಾಮಗಳನ್ನು ಕಡಬಾ ತಾಲ್ಲೂಕಿಗೆ ಸೇರ್ಪಡೆಗೊಳಿಸುವಂತೆ ಶಿಫಾರಸ್ಸು ಮಾಡಿರುವುದು ಖಂಡನೀಯ. ಈ ಎರಡು ಸಮಿತಿಗಳ ಅಭಿಪ್ರಾಯಕ್ಕೆ ನನ್ನ ಕ್ಷೇತ್ರದ ಜನತೆ ಹಾಗೂ ನನ್ನ ಸಂಪೂರ್ಣ ವಿರೋಧವಿದೆ. ನಮ್ಮ ತಾಲ್ಲೂಕಿನ ಯಾವುದೇ ಒಂದು ಗ್ರಾಮವನ್ನೂ ಕೂಡ ಇತರ ತಾಲ್ಲೂಕಿಗೆ ಸೇರ್ಪಡೆಗೊಳಿಸಬಾರದು ಈ ವಿಚಾರದಲ್ಲಿ

ಇನ್ನೊಂದು ಸಮಿತಿಯನ್ನು ಮಾಡಿ ನನ್ನ ಕ್ಷೇತ್ರದ ಜನತೆಯ ಅಭಿಪ್ರಾಯವನ್ನು ಪಡೆದ ನಂತರವೇ ಈ ವಿಚಾರದಲ್ಲಿ ಸರ್ಕಾರ ನಿರ್ಧಾರ ಮಾಡಬೇಕಾಗಿ ಈ ಮೂಲಕ ಸರ್ಕಾರವನ್ನು ಒತ್ತಾಯ ಪಡಿಸುತ್ತೇನೆ, ಅಂತೆಯೇ ಈ ವಿಚಾರದಲ್ಲಿ ಸರ್ಕಾರದ ಸ್ಪಷ್ಟವಾದ ನಿಲುವನ್ನು ತಿಳಿಸಬೇಕಾಗಿ ಈ ಮೂಲಕ ವಿನಂತಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕನ್ನು ಎರಡು ಪ್ರಾಂತಗಳಲ್ಲಿ ತಂಡರಿಸಿ ಬೇರೆ ತಾಲ್ಲೂಕಿಗೆ ಸೇರ್ಪಡೆ ಮಾಡಿ ಕೊಟ್ಟಿರುವ ಜಿಲ್ಲಾ ಪುನರ್ವಿಂಗಡಣಾ ಸಮಿತಿಯ ಶಿಫಾರಸ್ಸು ಏಕಪಕ್ಷೀಯವಾಗಿದ್ದು, ಈ ಬಗ್ಗೆ ಸಮಿತಿಯು ಬೆಳ್ತಂಗಡಿ ತಾಲ್ಲೂಕಿನ ಜನತೆಯಾನ್ನಾಗಲೀ ಮಾನ್ಯ ಸದಸ್ಯರ ಅಭಿಪ್ರಾಯವನ್ನಾಗಲೀ ಪಡೆಯದೇ ಶಿಫಾರಸ್ಸು ಮಾಡಿರುವುದಾಗಿ ಸೂಚಿಸಿರುತ್ತಾರೆ ಹಾಗೂ ಇನ್ನೊಂದು ಸಮಿತಿಯ ರಚನೆಯನ್ನು ಮಾಡಿ ತಮ್ಮ ಕ್ಷೇತ್ರದ ಜನತೆಯ ಅಭಿಪ್ರಾಯವನ್ನು ನಂತರವೇ ಸರ್ಕಾರ ನಿರ್ಧಾರ ತೆಗೆದುಕೊಳ್ಳಬೇಕೆಂದು ಸಹ ಸೂಚನೆ ನೀಡಿರುತ್ತಾರೆ.

ಮಾನ್ಯ ಸದಸ್ಯರು ಮಾನ್ಯ ಮುಖ್ಯಮಂತ್ರಿಯವರಿಗೆ ಶ್ರೀ ಹಾಡೇಕರ್‌ರವರ ವರದಿಯ ಶಿಫಾರಸ್ಸು ಬಗ್ಗೆ ಈ ಕೆಳಕಂಡ ಎರಡು ಅಂಶಗಳ ಬಗ್ಗೆ ಪತ್ರ ಬರೆದರೆ.

ಅ) ಬೆಳ್ತಂಗಡಿ ತಾಲ್ಲೂಕಿನ ವೇಣೂರು ಫಿರ್ಕಾವನ್ನು ಹೊಸದಾಗಿ ರೂಪಿಸಲಾಗುವ ಮೂಡಬಿದ್ರಿ ತಾಲ್ಲೂಕಿಗೆ ಸೇರ್ಪಡೆ ಮಾಡಬಾರದೆಂದೂ,

ಆ) ದಕ್ಷಿಣ ಕನ್ನಡ ಜಿಲ್ಲೆಯನ್ನು ವಿಭಾಗ ಮಾಡಿ ಉಡುಪಿ ಜಿಲ್ಲೆಯ ರಚನೆ ಮಾಡಬಾರದೆಂದೂ, ಹಾಗೂ ಬೆಳ್ತಂಗಡಿ ತಾಲ್ಲೂಕನ್ನು ಉಡುಪಿ ಜಿಲ್ಲೆಗೆ ಸೇರಿಸಬಾರದು.

ಈ ಪತ್ರದಲ್ಲಿನ ಅಂಶಗಳನ್ನು ಶ್ರೀ ಗದ್ದಿಗೌಡರ ಸಮಿತಿಯು ಪರಿಶೀಲಿಸಿ ಶ್ರೀ ಹಾಂಡೇಕರ್ ರವರ ಸಮಿತಿಯ ಶಿಫಾರಸ್ಸು ಸಮರ್ಥನೀಯವಾಗಿದೆ ಎಂದು ಆಗ ವ್ಯಕ್ತಪಡಿಸಿದೆ.

ಮೇಲ್ಕಂಡ ಶಿಫಾರಸ್ಸುಗಳ ಬಗ್ಗೆ ಸರ್ಕಾರವು ಯಾವುದೇ ತೀರ್ಮಾನವನ್ನು ಕೈಕೊಂಡಿರುವುದಿಲ್ಲ. ಜಿಲ್ಲಾ ಪುನರ್ವಿಂಗಡಣಾ ಸಮಿತಿಯ ಶಿಫಾರಸ್ಸುಗಳ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುವ ಸಮಯದಲ್ಲಿ ಮಾನ್ಯ ಸದಸ್ಯರ ಸಲಹೆಗಳನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು.

(೫) ಕೂಡ್ಲಿಗಿ ನೆಲಬೊಮ್ಮನ ಹಳ್ಳಿಯಲ್ಲಿ ೧೮ ಗುಡಿಸಲುಗಳು ಸುಟ್ಟು ಭಸ್ಮವಾಗಿರುವುದಕ್ಕೆ ಪರಿಹಾರ ನೀಡುವ ಬಗ್ಗೆ

SRI K. V. RAVINDRANATHA BABU (Kottur).—18 huts were burnt completely about three months back in Nelabommanahalli in Kudligi Taluka, Bellary District. Letters were written by me to Deputy Commissioner, Zilla Parishat President, Vice President and finally to the Cheif Minister. But so far nothing has been done. Most of these sufferers are now living under trees and in temple. Hence, I urge the Government to provide houses and sanction them compensation

ಶ್ರೀ ವೀರಣ್ಣ (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೆ, ದಿನಾಂಕ ೨೨-೨-೮೮ರಂದು ಮಧ್ಯಾಹ್ನ ೧ ಗಂಟೆಗೆ ನೆಲಬೊಮ್ಮನಹಳ್ಳಿಯ ಗೊಲ್ಲರ ಹಟ್ಟಿಯಲ್ಲಿ ಆಕಸ್ಮಿಕವಾಗಿ ಬೆಂಕಿ ಹತ್ತಿಕೊಂಡು ೧೮ ಗುಡಿಸಲುಗಳು ಮತ್ತು ಒಂದು ಇಟ್ಟಿಗೆ ಗೂಡು ಸುಟ್ಟು ಹೋಗಿವೆ. ಸುದ್ದಿ ತಿಳಿದ ಪೋಲೀಸರು ಸ್ಥಳಕ್ಕೆ ಧಾವಿಸಿ ಬೆಂಕಿಯನ್ನು ಹತೋಟಿಗೆ ತಂದಿರುತ್ತಾರೆ. ಈ ಬೆಂಕಿ ಪ್ರಕರಣವಲ್ಲಿ ಅಂದಾಜಿ ರೂಪಾಯಿಗಳಷ್ಟು ಲುಕ್ಸಾನು ಉಂಟಾಗಿದೆ. ಕೂಡ್ಲಿಗಿ ತಹಸೀಲ್ದಾರರು ಆನಾಹುತಕ್ಕೀಡಾದ ಮಂದಿಗೆ ತಲಾ ೩೦೦ ರೂಪಾಯಿಗಳಂತೆ ಪರಿಹಾರ ಧನವನ್ನು ಕೊಟ್ಟಿರುತ್ತಾರೆ. ಉಳಿದವರು ಈ ಪರಿಹಾರಕ್ಕೆ ಅರ್ಹರಲ್ಲ. ಕಾರಣ ಅವರ ವಾರ್ಷಿಕ ಆದಾಯ ಸರ್ಕಾರ ನಿಗಧಿಪಡಿಸಿರುವ ಆದಾಯ